# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 05/2021

ಸಿಡಬ್ಲುಃ 16 / ಪಿಡಬ್ಲುಃ 8

ದಿನಾಂಕಃ 05.06.2026

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಹರೀಶ ಶೆಟ್ಟಿ |
| ತಂದೆ ಹೆಸರು | : | ಸಾದುಶೆಟ್ಟಿ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಮ್ಯಾನೇಜರ, ಹರಿಪ್ರಸಾದ ಲಾಡ್ಜ, ಅಕ್ಷಯ ಪಾರ್ಕ, ಹುಬ್ಬಳ್ಳಿ |
| ವಾಸ ಸ್ಥಳ | : | ಉಡುಪಿ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ನಾನು ಕಳೆದ 6 ವರ್ಷಗಳಿಂದ ಹುಬ್ಬಳ್ಳಿಯ ಅಕ್ಷಯ ಪಾರ್ಕ ಹತ್ತಿರ ಇರುವ ಹರಿಪ್ರಸಾದ ಲಾಡ್ಜನಲ್ಲಿ ಮ್ಯಾನೇಜರ ಅಂತಾ ಕೆಲಸ ಮಾಡುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪೋಲೀಸರು ನಮ್ಮ ಲಾಡ್ಜಿಗೆ 5 ವರ್ಷಗಳ ಹಿಂದೆ ಬಂದಿದ್ದರು. ಪೋಲೀಸರು ನಮ್ಮ ಲಾಡ್ಜಿಗೆ ಬಂದು ಒಂದು ಫೋಟೋ ಮತ್ತು ಆಧಾರ ಕಾರ್ಡನ್ನು ತೋರಿಸಿ, ಅವರು ನಿಮ್ಮ ಲಾಡ್ಜಿನಲ್ಲಿ ರೂಮ್ ಬುಕ್ ಮಾಡಿದ್ದರೋ ಇಲ್ಲವೋ ಎಂದು ಕೇಳಿದರು. ಆಗ ನಾನು ನಮ್ಮ ಲಾಡ್ಜಿನ ರೆಜಿಸ್ಟರ ಪರಿಶೀಲಿಸಿ, ಅವರು ನಮ್ಮ ಲಾಡ್ಜಿನಲ್ಲಿ ರೂಮ ಬುಕ್ ಮಾಡಿದ್ದರು ಎಂದು ತಿಳಿಸಿದೆನು. ಸದರೀಯವರಿಗೆ ರೂಮ್ ನಂ. 303 ನ್ನು ಕೊಡಲಾಗಿತ್ತು. ಸಾಕ್ಷಿ ಮುಂದುವರೆದು, ನಿಖರವಾದ ರೂಮ ನಂಬರ ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಲಾಡ್ಜಿಗೆ ಇಬ್ಬರು ವ್ಯಕ್ತಿಗಳು ಬಂದಿದ್ದರು ಮತ್ತು ಅವರು ಕುಟುಂಬದವರು ಎಂದು ಹೇಳಿದ್ದರು. ಅವರಲ್ಲಿ ಒಬ್ಬ ಗಂಡು ಮಗ ಹಾಗೂ ಒಬ್ಬ ಹೆಣ್ಣುಮಗಳು ಇದ್ದರು. ಅವರು ಒಂದು ದಿನ ನಮ್ಮ ಲಾಡ್ಜಿನ ರೂಮಿನಲ್ಲಿ ಇದ್ದರು. ನಿಪಿ-7 ಫೋಟೋದಲ್ಲಿರುವ ರೂಮನ್ನು ಸಾಕ್ಷಿ ಗುರುತಿಸಲು ವಿಫಲರಾಗಿರುತ್ತಾರೆ. ಈಗ ಸಾಕ್ಷಿಗೆ ತೋರಿಸಿದ ದಾಖಲೆಯು ಕೇವಲ ಒಂದು ಪುಟವನ್ನು ಒಳಗೊಂಡಿದ್ದು ಅದು ಪೂರ್ತಿ ಪುಸ್ತಕವನ್ನು ಒಳಗೊಂಡಿರದ ಕಾರಣ ಗುರುತಿಸಲು ನಿರಾಕರಿಸಲಾಯಿತು. ಸಾಕ್ಷಿಯು, ಸದರಿ ದಾಖಲೆಯು ನಮ್ಮ ಲಾಡ್ಜಿನಲ್ಲಿ ರೂಮನ್ನು ನೀಡಿದ ಬಗ್ಗೆ ವಿವರ ಇರುವದಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಾರೆ. ಸದರಿ ದಾಖಲೆಯ ಪ್ರಕಾರ ರೂಮ ನಂ. 318 ನ್ನು ಪ್ರಕಾಶ ಪೂಜಾರ ಎಂಬುವವರಿಗೆ ನೀಡಲಾಗಿತ್ತು. ಸದರಿ ವ್ಯಕ್ತಿಯನ್ನು ನೋಡಿದರೆ ನನಗೆ

ಗುರುತಿಸಲು ಆಗುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ಗುರುತಿಸಲು ವಿಫಲರಾಗಿರುತ್ತಾರೆ.

3. ಈ ಪ್ರಕರಣದಲ್ಲಿ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ ಮತ್ತು ನಾನು ಕೂಡಾ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಇಷ್ಟನ್ನು ಹೊರತುಪಡಿಸಿ, ನನಗೆ ಈ ಪ್ರಕರಣದ ಬಗ್ಗೆ ಬೇರೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

## ಪಾಟಿ ಸವಾಲುಃ  ಪಿಪಿಯವರಿಂದಃ

4. ನಾನು ದಿನಾಂಕಃ 30.09.2020 ರಂದು ಈಗ ಓದಿ **ಹೇಳಿದ " ನಿನ್ನೆಯ ದಿವಸ ದಿನಾಂಕಃ 29.09.2020 ರಂದು ........................ ಸಾಯಂಕಾಲ 04.00 ಗಂಟೆಯಿಂದ 05.00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ." ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ.**

## ಪಾಟಿ ಸವಾಲುಃ ಶ್ರೀ ಎಸ್.ಬಿ. ಘಟ್ಟಿರೆಡ್ಡಿಹಾಳ, ಆರೋಪಿ ಪರ ವಕೀಲರಿಂದಃ

5. ಸಾಮಾನ್ಯವಾಗಿ ನಮ್ಮ ಲಾಡ್ಜಿಗೆ ಯಾರೇ ವ್ಯಕ್ತಿಗಳು ಬಂದರೂ, ಅವರ ಸಂಪೂರ್ಣ ವಿವರವನ್ನು ದಾಖಲೆಯಲ್ಲಿ ನಮೂದು ಮಾಡಿ, ಯಾವ ಉದ್ದೇಶಕ್ಕಾಗಿ ಬಂದಿದ್ದಾರೆ ಮತ್ತು ಅವರ ನಡುವೆ ಇರುವ ಸಂಬಂಧ ಏನು ಎಂದು ನಮೂದು ಮಾಡುತ್ತೇವೆ ಎಂದು ಹೇಳುತ್ತಾರೆ. ಅಪರಿಚಿತ ವ್ಯಕ್ತಿಗಳು ಬಂದಾಗ, ಅವರ ಸಂಬಂಧದ ಬಗ್ಗೆ ನಮಗೆ ತಕ್ಷಣ ಗೊತ್ತಾಗುವುದಿಲ್ಲ ಎಂದರೆ ಸರಿ. ನಮ್ಮ ಲಾಡ್ಜಿನ ಪೂರ್ಣ ರೆಜಿಸ್ಟರನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿವ ಇರುವುದಿಲ್ಲ ಎಂದರೆ ಸರಿ. ಈಗ ತೋರಿಸಿದ ದಾಖಲೆಯ ಆಧಾರದ ಮೇಲೆ ಯಾರು ಯಾರು ನಮ್ಮ ಲಾಡ್ಜಿಗೆ ಬಂದಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

6. ನಮ್ಮ ಲಾಡ್ಜಿನಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಲಾಗಿದೆ ಎಂದರೆ ಸರಿ. ಸದರಿ ಕ್ಯಾಮೆರಾದ ಫೂಟೇಜನ್ನು ಪೋಲೀಸರು ವಶಪಡಿಸಿಕೊಂಡಿಲ್ಲ ಮತ್ತು ಪೋಲೀಸರು ಅದನ್ನು ಪರಿಶೀಲಿಸಿಲ್ಲ. ಆ ದಿನ ಪೋಲೀಸರು ನನಗೆ ಫೋಟೋವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**